ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 31/12/19

# ವಸತಿ ಯೋಜನೆಯಲ್ಲಿ ಮಹತ್ವದ ಮಾರ್ಪಾಡು

**ಬೆಂಗಳೂರು:** ನಗರದ 'ಮುಖ್ಯಮಂತ್ರಿ ಒಂದು ಲಕ್ಷ ಮನೆ ನಿರ್ಮಾಣ ಯೋಜನೆ'ಯಲ್ಲಿ ಮಹತ್ವದ ಮಾರ್ಪಾಡು ಮಾಡಲಾಗಿದೆ. ನೆಲಮಹಡಿ ಜತೆಗೆ 3 (ಜಿ+3) ಮಹಡಿಗಳ ನಿರ್ಮಾಣ, ವಾರ್ಷಿಕ ಮೂರು ಲಕ್ಷ ರೂ. ಆದಾಯ ಉಳ್ಳವರಿಗೂ ಅರ್ಜಿ ಹಾಕಲು ಅವಕಾಶ ನೀಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಸೋಮವಾರ ನಿರ್ಧರಿಸಲಾಗಿದೆ.

» **ವಾರ್ಷಿಕ 3 ಲಕ್ಷ ರೂ. ಆದಾಯವಿದ್ದರೂ ಅರ್ಜಿ ಸಲ್ಲಿಸಬಹುದು**

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಈ ವಿಷಯ ತಿಳಿಸಿ, ಹಿಂದಿನ ಸರ್ಕಾರದ 14 ಮಹಡಿ ತೀರ್ಮಾನ ಹಿಂದಕ್ಕೆ ಪಡೆದು ಜಿ +3 ಮಹಡಿಗೆ ಸೀಮಿತಗೊಳಿಸಲಾಗಿದೆ. ಹಾಗೆಯೇ ಹೆಚ್ಚು ಅರ್ಜಿದಾರರಿಗೆ ಅವಕಾಶ ನೀಡಲೆಂದು ಆದಾಯದ ಮಿತಿ ವಾರ್ಷಿಕ ಮೂರು ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ವಸತಿ ಸೌಲಭ್ಯ ಕಲ್ಪಿಸಿದ ಬಳಿಕ ತಲೆದೋರಬಹುದಾದ ನಿರ್ವಹಣೆ ಇನ್ನಿತರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮಹಡಿ ಸಂಖ್ಯೆ ಕಡಿತಗೊಳಿಸಲಾಗಿದೆ. ಸದ್ಯ ಪೂರ್ಣಗೊಂಡ, ನಿರ್ಮಾಣ ಹಂತದ 37 ಸಾವಿರ ಮನೆಗಳನ್ನು ಬಿಟ್ಟು ಮುಂದೆ ಟೆಂಡರ್ ಕರೆದು ಗುತ್ತಿಗೆ ನೀಡುವ ಕಾಮಗಾರಿಗೆ ಜಿ+3 ಮಹಡಿ ಅನ್ವಯಿಸುತ್ತದೆ.

**ಸಿದ್ದರಾಮಯ್ಯ ಸರ್ಕಾರದ ಯೋಜನೆ:** ಸಿದ್ದರಾಮಯ್ಯ ಸರ್ಕಾರದ ಅವಧಿಯ 'ಜನಪ್ರಿಯ' ಯೋಜನೆಗಳ ಪೈಕಿ ಬೆಂಗಳೂರಿನಲ್ಲಿ 'ಮುಖ್ಯಮಂತ್ರಿ ಒಂದು ಲಕ್ಷ ಮನೆ ನಿರ್ಮಾಣ' ಯೋಜನೆ ಒಂದಾಗಿದೆ. ಭೂಸ್ವಾಧೀನ, ಆದಾಯಮಿತಿ ಸೇರಿ ವಿವಿಧ ಅಂಶಗಳು ಹಲವು ಆಕ್ಷೇಪ ಹಾಗೂ ವಿವಾದಗಳಿಗೆ ಕಾರಣವಾಗಿದ್ದವು